**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 50/2022.**

**ಚಾಸಾ-46**

**ಪ್ರಾಸಾ-05**

**ದಿನಾಂಕಃ 13-05-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | | |
|---|---|---|
| ಸಾಕ್ಷಿಯ ಹೆಸರು | ಃ | ಶ್ರೀನಿವಾಸ ತಂಃ ಜೋಗು ಗುರವ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ, ಜೋಯಿಡಾ ಪೊಲೀಸ್ ಠಾಣೆ |
| ವಾಸ | ಃ | ಜೋಯಿಡಾ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ನಾನು 2019 ರಿಂದ ಇಲ್ಲಿಯ ವರೆಗೆ ಜೋಯಿಡಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 08-06-2021ರಂದು ರಂದು ನಾನು ಠಾಣಾ ಪ್ರಭಾದಲ್ಲಿದ್ದಾಗ, ಬೆಳಿಗ್ಗ 11-20 ಗಂಟೆಗೆ ಚಾಸಾ-25 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು, ಮಹಜರನ್ನು ಮತ್ತು ಜಪ್ತುಪಡಿಸಿದ ವಸ್ತುಗಳನ್ನು ನೀಡಿದ್ದು, ಅವುಗಳನ್ನು ಪಡೆದು, ಠಾಣಾ ಗುನ್ನಾ ನಂಃ 30/2021 ರಂತೆ ಪ್ರಕರಣವನ್ನು ದಾಖಲಿಸಿ, ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ.

3. ನಂತರ ಜಪ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆಃ 19/2021 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ. ನಂತರ ನನ್ನ ಮೇಲಾಧಿಕಾರಿಗಳ ಆದೇಶದಂತೆ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-47 ರವರಿಗೆ ಹಸ್ತಾಂತರಿಸಿರುತ್ತೇನೆ.

4. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ-4** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-4(ಬಿ)** ಎಂದು ಗುರುತಿಸಲಾಯಿತು.

5. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ-೯** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-೯(ಎ)** ಎಂದು ಗುರುತಿಸಲಾಯಿತು.

6. ಸಾಕ್ಷಿಯು ನ್ಯಾಯಾಲಯದಲ್ಲಿರುವ ಒಂದು ನಾಡ ಬಂದೂಕನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ಎಸ್. ಕೆ ವಕೀಲರಿಂದ**

7. ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಅವನ ವಿರುದ್ಧ ನನ್ನ ಮೇಲಾಧಿಕಾರಿಗಳ ಆದೇಶದಂತೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿರುವ ಮುದ್ದೆ ಮಾಲಗಳಿಗೂ ದ್ವಿ ಚಕ್ರ ವಾಹನಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**